

# ಮಹಾ ಸಮ್ಮಿಲನ

ರವಿ, ಮಂಜ್ನಾತ, ನಾಗ್ರಾಜ .. ಮೂವರೂ ಹುಡುಗ್ರು ಸೇರಿ ಓಡಿದ್ದೇ ಓಡಿದ್ದು! ಪೇಟೆ ಕಡೆಗೆಂದು ಹೊರಟವರು ಅದನ್ನು ಬಿಟ್ಟು ದಾಸನ ಕಟ್ಟೆಯ ಹಾಡಿಯ ಕಡೆಗೆ ಉಸಿರು ಬಿಗಿ ಹಿಡಿದು ಓಡಿದರು. ಅದಕ್ಕೆ ಕಾರಣ ಕೇಳಿದ್ದ ಆ ಸುದ್ದಿ ಹಾಗಿತ್ತು. ದಾಸನ ಕಟ್ಟೆಯ ಆ ಅಭಯಾರಣ್ಯದ ಮಧ್ಯದಲ್ಲಿ ಬಿಳಿ ಮೊಟ್ಟೆಯಾಕಾರದ ದೈತ್ಯ ಕಲ್ಲು ಕಾಣಸಿಕ್ಕಿದೆಯಂತೆ !

ದಾಸನ ಕಟ್ಟೆ ಕಾಡು ಬಹಳ ಪುರಾತನವಾದದ್ದು. ಮರಗಳ್ಳರು ಸಾಕಷ್ಟು ಕಡಿದಿದ್ದರೂ ಅದರ ಮಧ್ಯಭಾಗವನ್ನು ಇದುವರೆಗೂ ಯಾರೂ ಹೊಕ್ಕಿರಲಿಲ್ಲ. ಅಂತಹ ದಟ್ಟ ಕಾಡನ್ನು ಯಾರೋ ಕಡಿಯಲಾರಂಭಿಸಿದ್ದರು. ಅರ್ಧದಷ್ಟು ಕಡಿದಾದ ಮೇಲೆ ಬಹು ದಟ್ಟವಾಗಿ ಬಿಳಿಲುಗಳಿಂದ ಮುಚ್ಚಿದಂತಿದ್ದ ಆ ಜಾಗದ ಸನಿಹ ಬಂದಿದ್ದರು. ಒಂದೊಂದೇ ಮರ, ಗಿಡ– ಬಳ್ಳಿ ಕತ್ತರಿಸಿ ಬೀಳುತ್ತಿದ್ದಂತೆ ಧುತ್ತೆಂದು ಕಾಣಿಸಿಕೊಂಡಿತು ಆ ದೊಡ್ಡ ಬಂಡೆ ! ಒಂದು ದೊಡ್ಡ ಮಹಡಿ ಮನೆ ಗಾತ್ರವಿತ್ತು. ಬೆಳ್ಳಗೆ ಮೊಟ್ಟೆಯಾಕಾರ ! ನುಣುಪಂದ್ರೆ ನುಣುಪು. ನಿಜಕ್ಕೂ ಅದು ಮೊಟ್ಟೆಯಾ? ಹತ್ತಿರದ ಮರ ಗಿಡ ಕಡಿಯುತ್ತಿರಬೇಕಾದರೆ ಅದರ ಮೇಲೆ ಎಷ್ಟೊಂದು ದಿಮ್ಮಿ ಉರುಳಿ ಬಿದ್ದಿಲ್ಲ. ಎಷ್ಟೆಲ್ಲ ಕತ್ತಿ, ಗರಗಸ ತಾಗಿದರೂ ಒಡೆಯುವುದಿರಲಿ, ಒಂದು ಗೀರೂ ಬೀಳದೆ ಉಳಿದಿದೆಯಲ್ಲ !

ಕಾಡು ಕಡಿಯುವ ಗುತ್ತಿಗೆ ಪಡೆದಾತ ಅದಾಗಲೇ ತನ್ನ ವ್ಯಾಪಾರೀ ಬುದ್ಧಿ ಓಡಿಸಿದ್ದ. ಈ ಹುಡುಗರು ಅಲ್ಲಿ ತಲುಪಿ ನೋಡುವಾಗ ಆತ ಅದಕ್ಕಾಗಲೇ ಒಂದು ಬೇಲಿಯಾಕಾರದ ಆವರಣ ಹಾಕಿ, ಒಳ ಹೋಗಲು ದ್ವಾರ ನೆಟ್ಟು, ಸಂದರ್ಶನ ಟಿಕೇಟನ್ನು ಮಾರಲು ವ್ಯವಸ್ಥೆ ಮಾಡಿಬಿಟ್ಟಿದ್ದ ! ಪೇಟೆ ಕಡೆಗೆಂದು ಹೊರಟಿದ್ದ ಇವರ ಕಿಸೆಯಲ್ಲಿ ಸ್ವಲ್ಪ ಕಾಸಿತ್ತು. ಅದರಿಂದಲೇ ಚೀಟಿ ಪಡೆದು ಒಳ ಹೊಕ್ಕರು. ಹತ್ತಿರ ಹೋದರು. ಮುಟ್ಟಿಯೂ ನೋಡಿದರು. ಇದು ಖಂಡಿತವಾಗಿ ಕಲ್ಲಾಗಿರಲು ಸಾಧ್ಯವಿಲ್ಲ, ಇದೊಂದು ಮೊಟ್ಟೆಯೇ ಸರಿ ಎಂದುಕೊಂಡರು.

ಹುಡುಗರಿಗೀಗ ಪ್ರವಾಸಿ ತಾಣವೇ ಅದಾಗಿಬಿಟ್ಟಿದೆ. ಬೇಸಿಗೆ ರಜೆ ಬೇರೆ. ಬುತ್ತಿ ಕಟ್ಟಿಕೊಂಡು ದಿನವೂ ಅಲ್ಲಿಗೆ ಹೋಗುವುದು, ದೂರದಿಂದಲೇ ನೋಡುವುದು. ಈಗೊಂಥರಾ ಜಾತ್ರೆ ಅಲ್ಲಿ. ದೂರದೂರಿಂದಲೂ ನೋಡಲು ಬರುವ ಜನ. ಅವರಿಗೆ ತಿಂಡಿ– ತಿನಿಸು ಒದಗಿಸಿ ದುಡ್ಡು ಮಾಡಿಕೊಳ್ಳುವ ವ್ಯಾಪಾರಿಗಳು, ಮಕ್ಕಳ ಆಟಿಕೆ ಸಾಮಾನು ಮಾರುವವರು.. ಗಮ್ಮತ್ತೇ ಗಮ್ಮತ್ತು !

ಕೆಲವು ದಿನ ಕಳೆದವು. ಈ ಹುಡುಗರೂ ಆ ನಡು ಮಧ್ಯಾಹ್ನ ಅಲ್ಲಿಯೇ ಇದ್ದಾಗ ಇದು ನಡೆದಿದೆ, ಬಿಸಿಲ ಧಗೆ ಅಂದ್ರೆ ಧಗೆ. ಆಗ ಕೇಳಿ ಬಂತು ದೊಡ್ಡ ಗೊಳ ಗೊಳ ಶಬ್ದ. ಏನೋ ಭೀಕರವಾಗಿ ಒಡೆದು ಹೋಗುತ್ತಿರುವ ಸದ್ದು! ಭೂಕಂಪವೇ ಆಗುತ್ತಿದೆಯೇನೋ ಅನ್ನುವ ಭಯದ ವಾತಾವರಣ. ನಿಜ ! ಆ ಬಿಳಿಯ ಕಲ್ಲು ಬಿರುಕು ಬಿಡುತ್ತಿತ್ತು. ಜ್ವಾಲಾಮುಖಿಯು ಸ್ಫೋಟವಾಗಿ ಅದರ ಲಾವಾ ಊರೆಲ್ಲ ಸಿಡಿದಂತೆ ಮೇಲಿನಿಂದ ಆ ಕಲ್ಲಿನ ಪುಡಿ ಸುತ್ತೆಲ್ಲ ಬೀಳುತ್ತಿತ್ತು. 'ಕ್ರಾಂವ್ ಕ್ರಾಂವ್' ಎಂದು ಭೀಕರವಾಗಿ ಕೂಗುತ್ತಾ ಬೃಹತ್ ಪಕ್ಷಿ ಮರಿ ಮೊಟ್ಟೆಯೊಡೆದು ಹೊರ ಬಂದಿತ್ತು. ಸುತ್ತಲಿದ್ದವರೆಲ್ಲ ಎದ್ದೆವೋ ಬಿದ್ದೆವೋ ಎನ್ನುತ್ತ ಪರಾರಿ ! ಹೋಟೆಲು ಸಾಮಾನುಗಳು, ಆಟಿಗೆಗಳು, ಗುತ್ತಿಗೆದಾರ,